ಅವಲೋಕಿಸಿ, ದೊಡ್ಡ ವರದಕ್ಷಿಣೆ ಕೊಟ್ಟು, ಎಲ್ಲವೂ ಹೊಂದಿಕೆಯಾದ ನಂತರ ಭರ್ಜರಿಯಾಗಿ ಮಾಡಿದ ಸಂಪ್ರದಾಯ ವಿವಾಹ ಅವರದು. ಅವರಿಗೆ ಹದಿಮೂರು ವರ್ಷದ ಹೆಣ್ಣುಮಗಳಿದ್ದಳು. ಈ ಸಂದರ್ಭದಲ್ಲಿ ಕೇವಲ ಪತ್ನಿ ಮಾತ್ರ ನನ್ನೊಡನೆ ಮಾತಾಡಲು ಕೋರಿಕೊಂಡಿದ್ದಳು. ಪತಿಗೆ ಈ ಆಪ್ತಸಮಾಲೋಚನೆಯ ವಿಷಯ ಗೊತ್ತಿರಲಿಲ್ಲ. ಆಕೆ ಸಾಕಷ್ಟು ಓದಿಕೊಂಡಿದ್ದಳು ಮತ್ತು ಆಸ್ಟ್ರೇಲಿಯಾದಲ್ಲಿ ಒಳ್ಳೆಯ ಸಂಬಳದ ಉದ್ಯೋಗವನ್ನು ಮಾಡುತ್ತಿದ್ದಳು. ಆಕೆಯ ಪತಿಯೂ ಒಂದೊಳ್ಳೆಯ ಉದ್ಯೋಗದಲ್ಲಿದ್ದ.

'ನನಗೆ ಇವನ ಸ್ವಭಾವ ಈ ರೀತಿ ಅಂತ ತುಂಬಾ ತಡವಾಗಿ ಗೊತ್ತಾಯ್ತು. ನಾನು ಆ ರೀತಿಯ ಜಗತ್ತನ್ನು ಊಹೆಯೂ ಮಾಡಿರಲಿಲ್ಲ. ನಮ್ಮ ಸಂಪ್ರದಾಯಸ್ಥ ಮನೆಯಲ್ಲಿ ಈ ತರಹದ ವಿಷಯಗಳನ್ನು ಯಾರೂ ನನಗೆ ಹೇಳಿರಲೂ ಇಲ್ಲ' ಎಂದೇ ಪ್ರಾರಂಭಿಸಿದಳು.

'ಆತನ ತಾಯಿಯನ್ನು ಕಂಡರೆ ಈಗಲೂ ನನಗೆ ಹೆದರಿಕೆಯಾಗುತ್ತದೆ. ಅದೆಷ್ಟು ಸಿಟ್ಟು ಸೆಡವಿನ ವ್ಯಕ್ತಿಯೆಂದರೆ ಆಕೆಯ ಸಮ್ಮುಖದಲ್ಲಿ ನನಗೆ ಏನೊಂದೂ ಯೋಚಿಸಲು ಸಾಧ್ಯವಾಗುತ್ತಿರಲಿಲ್ಲ. ನನ್ನತನವನ್ನೇ ಕಳೆದುಕೊಂಡು ಸುಮ್ಮನೆ ನಡುಗುತ್ತಾ ನಿಲ್ಲುತ್ತಿದ್ದೆ. ಏನು ಮಾಡಿದರೂ ತಪ್ಪು, ಏನು ಹೇಳಿದರೂ ತಪ್ಪು. ಆಕೆ ಪ್ರೀತಿಯಿಂದ ನನ್ನನ್ನು ಮಾತಾಡಿಸಿದ ಸಂದರ್ಭವೇ ನೆನಪಿಲ್ಲ. ಈತನಿಗೋ ತಾಯಿಯೇ ದೇವರು. ಆಕೆಯನ್ನು ಸಂತೃಪ್ತಿಗೊಳಿಸಲು ಇನ್ನಿಲ್ಲದಂತೆ ಒದ್ದಾಡುತ್ತಿದ್ದ. ಆರಂಭದಲ್ಲಿ ಈತನೇಕೆ ಹೀಗೆ ನನ್ನಿಂದ ದೂರ ಇರುತ್ತಾನೆ, ನನ್ನ ಹತ್ತಿರ ಬರಲು ಏಕೆ ಹಿಂಜರಿಯುತ್ತಾನೆ ಎಂದು ತಿಳಿಯುತ್ತಿರಲಿಲ್ಲ. ಅವರಮ್ಮ ಪ್ರತಿನಿತ್ಯ ನನ್ನ ಮೇಲೆ ವಿನಾಕಾರಣ ಸಿಟ್ಟಾಗುತ್ತಾಳಾದ ಕಾರಣ, ಇವನು ನನ್ನನ್ನು ದೂರವಿಡುತ್ತಿದ್ದಾನೆ ಎಂದು ಅರ್ಥ ಮಾಡಿಕೊಂಡೆ. ಅದಕ್ಕಾಗಿ ಅಮ್ಮ-ಮಗ ಇಬ್ಬರನ್ನೂ ಇನ್ನಿಲ್ಲದಂತೆ ಸಂತೃಪ್ತಿಗೊಳಿಸಲು ಪ್ರಯತ್ನಿಸುತ್ತಿದ್ದೆ. ಯಾವುದೂ ಫಲ ಕೊಡುತ್ತಿರಲಿಲ್ಲ...

'ಎಷ್ಟು ದಿನ ಅಂತ ಯಾರಾದರೂ ದೇಹದ ಬಯಕೆಯನ್ನು ನಿಯಂತ್ರಿಸಲು ಸಾಧ್ಯ ಹೇಳಿ? ಅವನನ್ನು ಒತ್ತಾಯ ಮಾಡಲು ತೊಡಗಿದೆ. ಅವನಿಗೆ ಪೀಕಲಾಟಕ್ಕಿಟ್ಟುಕೊಂಡಿತು. ಕೊನೆಗೆ ತನ್ನೆಲ್ಲಾ ಮುಜುಗರಕ್ಕೆ ಮುಕ್ತಿ ಹೇಳಲು ಆಸ್ಟ್ರೇಲಿಯಾಕ್ಕೆ ವರ್ಗಾವಣೆ ಮಾಡಿಸಿಕೊಂಡು 'ಹೋಗಲೇಬೇಕು' ಎಂದು ನೆಪ ಹೇಳಿ ಹೊರಟುಬಿಟ್ಟ. ಅವರಮ್ಮನ ಯೋಗಕ್ಷೇಮದ ಜವಾಬ್ದಾರಿ ನಾನು ನೋಡಿಕೊಳ್ಳಬೇಕೆಂದು ಅಪ್ಪಣೆ ಮಾಡಿ ಹೋದ...

'ನನಗೆ ಮನೆ ನರಕವಾಗಿ ಹೋಯಿತು. ಎಷ್ಟು ದಿನವೆಂದು ಸಹಿಸಲಿ? ಗಂಡ ಹತ್ತಿರವಿಲ್ಲ ಎಂಬ ನೋವು ಒಂದೆಡೆಯಾದರೆ, ಎಷ್ಟು ತೈಲ ಎರೆದರೂ ತೃಪ್ತಿಯಾಗದ ಅತ್ತೆಯೆಂಬ ಬೆಂಕಿ ಮತ್ತೊಂದು ಕಡೆ. ಕೊನೆಗೊಂದು ಉಪಾಯ ಮಾಡಿದೆ. ಯಾರಿಗೂ ಹೇಳದಂತೆ ನಾನೂ ಕೆಲಸದಲ್ಲಿ ವರ್ಗಾವಣೆ ಮಾಡಿಸಿಕೊಂಡು ಮಗಳನ್ನು ಕರೆದುಕೊಂಡು ಈ ದೇಶಕ್ಕೆ ಬಂದು ಬಿಟ್ಟೆ. ಯಾರು ವಿರೋಧಿಸಿದರೂ ಕೇಳಲಿಲ್ಲ...

'ಇಲ್ಲಿಗೆ ಬಂದ ನಂತರ ಜಗತ್ತು ಅರಿವಾಗತೊಡಗಿತು. ಅವರಮ್ಮ ಇಲ್ಲದ ಈ ಊರಲ್ಲಿ ನನಗೆ ಬದುಕನ್ನು ಕುರಿತು ಧ್ಯಾನಿಸಲು ಸಮಯ ಸಿಗತೊಡಗಿತು. ಯಾಕಿವನು ತನ್ನ ಗೆಳೆಯರ ಜೊತೆಗೆ ಹೆಚ್ಚು ಸಮಯ ಕಳೆಯಲು ಒದ್ದಾಡುತ್ತಾನೆ? ಅವರ ರೂಮಿಗೇ ಹೋಗಿ ಮಲಗಿಕೊಳ್ಳುತ್ತಾನೆ? ಅವರಮ್ಮ ಇಲ್ಲದ ಈ ಊರಲ್ಲಿ ನನ್ನನ್ನು ಕಂಡರೆ ಏಕೆ ಹೆದರಿಕೊಳ್ಳುತ್ತಾನೆ? ಹೀಗೆಲ್ಲಾ ಯೋಚಿಸಿ ಸಹದ್ಯೋಗಿಗಳ ಜೊತೆ ಸಮಸ್ಯೆಯನ್ನು ಹಂಚಿಕೊಳ್ಳುವ ಧೈರ್ಯ ಮಾಡಿದೆ. ಈ ದೇಶದಲ್ಲಿ ಇಂತಹ ಸಂಗತಿಗಳನ್ನು ಜನರು ಯಾರಿಗೂ ಮುಜುಗರವಾಗದಂತೆ ಮಾತಾಡುತ್ತಾರೆ. ನನ್ನ ಸಂಕಟವನ್ನು ಅರ್ಥ ಮಾಡಿಕೊಂಡ ಅವರು, ಅವನು ಬಹುಶಃ ಗೇ ಇರಬೇಕು ಎಂದು ಊಹೆ ಮಾಡತೊಡಗಿದರು. ಆ ಊಹೆಗಳು ನಿಜವೆಂದು ನನಗೆ ಕ್ರಮೇಣ ಅರಿವಾಗತೊಡಗಿತು.'

ಇದೆಲ್ಲಾ ತಿಳಿಯಲು ಇಷ್ಟೆಲ್ಲಾ ವರ್ಷಗಳ ಕಾಲ ಬೇಕಾಗುತ್ತದೆಯೆ ಎನ್ನುವ ಅನುಮಾನ ನನಗೆ ಬರುತ್ತಿತ್ತು. ಆದರೆ ಸರಿಯಾದ ಹಿತೈಷಿಗಳು, ಸಮುದಾಯ, ತಿಳಿವಳಿಕೆಯುಳ್ಳವರು ನಮ್ಮ ಸುತ್ತಮುತ್ತ ಇರದಿದ್ದರೆ ಕಡ್ಡಿಯೂ ಗುಡ್ಡವಾಗುತ್ತದೆ. ಚಿಕ್ಕ ಸಂಗತಿ ಅರಿವಾಗಲೂ ಹಲವು ವರ್ಷಗಳು ಕಳೆದುಹೋಗುತ್ತವೆ. ನಾವು ಧೈರ್ಯಸ್ಥರಲ್ಲದಿದ್ದರೆ ಎಷ್ಟೋ ಸಂಗತಿಗಳು ಸಾಯುವ ತನಕವೂ ನಮಗೆ ತಿಳಿಯುವುದಿಲ್ಲ.